


## ಸಂದರ್ಭೋಚಿತ ಬರಹ

‘ಜಲ; ತಳಮಳ’ (ಫೆ. 08, ಟಿ.ಎಂ. ಶಿವಶಂಕರ್) ಮುಖಪುಟ ಲೇಖನ ಸಂದರ್ಭೋಚಿತವಾಗಿದೆ. ವೈಜ್ಞಾನಿಕ ವಿಶ್ಲೇಷಣೆ ಸರಳ ಹಾಗೂ ಮನಮುಟ್ಟುವಂಥದ್ದು. ನಮ್ಮೆಲ್ಲರ ಸುಂದರ ಹಾಗೂ ಉತ್ತಮತರ ನಾಳೆಗಾಗಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವುದು ಹಾಗೂ ಜೀವನದಲ್ಲಿ ಅನುಷ್ಠಾನಗೊಳಿಸುವುದು ಹಿಂದೆಂದಿಗಿಂತಲೂ ಈಗ ಹೆಚ್ಚು ಅನಿವಾರ್ಯ.

—ಡಾ. ಸಿ. ನಾಗಭೂಷಣ, ಬಳ್ಳಾರಿ

## ದುರಂತದ ದಿನಗಳಿಗೆ ಎಚ್ಚರಿಕೆ ಗಂಟೆ

ಜಲದ ಪ್ರಾಮುಖ್ಯವನ್ನು ತಿಳಿಸಿಕೊಟ್ಟ ಮುಖಪುಟ ಲೇಖನ, ಇಂದಿನ ಪೀಳಿಗೆಗೆ ಎಚ್ಚರಿಕೆ ಗಂಟೆಯಾಗಬೇಕು. ನೀರು, ನಾವು ಕುಡಿಡುವ ಹಣಕ್ಕೂ ಹೆಚ್ಚು ಎಂಬುದು ಅರಿವಾಗಬೇಕು. ನಗರ ಪ್ರದೇಶಗಳ ಮನೆ ಮನೆಗಳಲ್ಲಿ ಬೋರ್‌ವೆಲ್ ಕೊರೆಸುವುದು, ವರ್ಷದಿಂದ ವರ್ಷಕ್ಕೆ ಜಲಾನಯನ ಪ್ರದೇಶಗಳಲ್ಲಿ ಮಳೆ ಕಡಿಮೆಯಾಗುತ್ತಿರುವುದು, ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ವಿಫಲವಾಗಿರುವುದು, ನಗರದ ಸುತ್ತಲೂ ಇದ್ದ ಕೆರೆಕಟ್ಟೆಗಳು ಒತ್ತುವರಿಯಾಗಿ ಜನವಸತಿ ಪ್ರದೇಶವಾಗಿರುವುದು, ಹಿಂದೆ ಇದ್ದ ಕಾಡು ನಾಶವಾಗಿ ಕಾಂಕ್ರೀಟ್ ನಾಡಾಗುತ್ತಿರುವುದು, ರೈತರು ಕೃಷಿ ಮಾಡುತ್ತಿದ್ದ ಭೂಮಿ ನಿವೇಶನಗಳಾಗುತ್ತಿರುವುದು, ಜಲಸಂರಕ್ಷಣೆ ಕುರಿತು ಸರ್ಕಾರ ಸೂಕ್ತ ಕಾನೂನನ್ನು ಜಾರಿಗೆ ತರದೇ ಹೋಗಿರುವುದು... ಇವೆಲ್ಲವೂ ಅಂತರ್ಜಲ ತಗ್ಗಲು ಪ್ರಮುಖ ಕಾರಣಗಳೇ. ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ದುರಂತದ ದಿನಗಳು ದೂರವಿಲ್ಲ ಎಂದೇ ತಿಳಿಯಬೇಕು.

— ಬೂಕನಕೆರೆ ವಿಜೇಂದ್ರ, ಮೈಸೂರು

## ಎಂಥ ವೈರುಧ್ಯ!

ಬೆಂಗಳೂರಿನ ಬೆಳಗಿನ ಚುಮುಚುಮು ಚಳಿಯಲ್ಲಿ ಮನೆಯಿಂದ ಹೊರಬಂದು ಆಗಷ್ಟೇ ಗೇಟಿಗೆ ಸಿಕ್ಕಿಸಿ ಹೋಗಿದ್ದ ‘ಸುಧಾ’ ನೋಡಿ ಅರೆಕ್ಷಣ ತಳಮಳಗೊಂಡೆ. ಮುಖಪುಟ ಚಿತ್ರದಲ್ಲಿ ನೀರಿಗಾಗಿ ಜನ ಪಡುತ್ತಿರುವ ಪಾಡು ನೋಡಿ ಖೇದವೆನಿಸಿತು. ಒಂದೆಡೆ ಎಗ್ಗಿಲ್ಲದೆ ನೀರು ಬಳಸುವ ತಂಪುಪಾನೀಯ ಘಟಕಗಳು, ನೀರಿನ ಬಾಟಲ್ ಕಂಪನಿಗಳು, ಮತ್ತೊಂದೆಡೆ ಹನಿ ನೀರಿಗಾಗಿ ಪರಿತಪಿಸುತ್ತಿರುವ ಜನ. ಎಂತಹ ವೈರುಧ್ಯ?

—ಸುಘೋಷ ಸ. ನಿಗಳೆ, ಬೆಂಗಳೂರು

## ಅಂತರ್ಜಲದ ಅರಿವು ಅಗತ್ಯ

ಅಂತರ್ಜಲದ ಕುರಿತ ಲೇಖನ ಕಣ್ಣು ತೆರೆಸುವಂತಿದೆ. ಅಂತರ್ಜಲದ ಕುರಿತು ಲೇಖಕರು ದತ್ತಾಂಶ ಸಮೇತ ಎಚ್ಚರಿಕೆ ನೀಡಿದ್ದಾರೆ. ನೀರಿನ ಸಂರಕ್ಷಣೆಗೆ ಎಲ್ಲರೂ ಬದ್ಧರಾಗದಿದ್ದರೆ ವಿನಾಶ ಖಂಡಿತ ಎಂಬುದನ್ನು ಲೇಖನ ಒತ್ತಿಹೇಳಿದೆ.

—ಕೆ. ಗಣೇಶ ರಾಜ, ಬೆಂಗಳೂರು

## ‘ಮಂದಹಾಸ’ ಮೂಡಿತು

‘ಸೀನಿನ sceneಗಳು’ (ಫೆ. 08, ಪ್ರಭಾಮಣಿ ನಾಗರಾಜ) ‘ಮಂದಹಾಸ’, ಮೊದಲಿನಿಂದ ಕೊನೆಯವರೆಗೆ ಮನದೊಳಗೆ ನಗು ತುಂಬಿ ಓದಿಸಿಕೊಂಡು ಹೋಯಿತು. ಓದಿ ಮುಗಿಸಿದ ನಂತರವೂ ಮಂದಹಾಸ ಮುಖದಲ್ಲಿ ಇರುವಂತೆ ಮಾಡಿತು.

—ವಿನು ಗಂಗೆ



## ಮುಜುಗರ ಮರೆತಿಲ್ಲ!

ನಮ್ಮ ತಂದೆ ಹೊಸದಾಗಿ ಹಲ್ಲು ಕಟ್ಟಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಊಟಕ್ಕೆ ಕುಳಿತಿದ್ದಾಗ, ಜೋರಾದ ಸೀನು ಬಂದು ಹಲ್ಲಿನ ಸೆಟ್ ಹೊರಗೆ ಬಂದು, ಎದುರು ಪಂಕ್ತಿಯಲ್ಲಿದ್ದ ಹಿರಿಯರ ಎಲೆಯಲ್ಲಿ ಬಿದ್ದುಬಿಟ್ಟಿತು. ಆಗ ಆದ ಕೋಲಾಹಲ, ಮುಜುಗರ ಇನ್ನೂ ಮರೆತಿಲ್ಲ.

—ವಿಜಯ್‌ಕುಮಾರ್ ಪಿ.ಡಿ., ಬೆಂಗಳೂರು

## ಬೆಚ್ಚಿಬೀಳಿಸುವ ‘ಸೀನ್’

ನನ್ನ ಸ್ನೇಹಿತ ತರಗತಿ ನಡೆಯುವಾಗ ಸೀನಿದರೆಂದರೆ ಪಾಠ ಮಾಡುತ್ತಿದ್ದ ಶಿಕ್ಷಕರೂ, ವಿದ್ಯಾರ್ಥಿಗಳೂ ಒಮ್ಮೆಗೇ ಮೈಮೇಲೆ ಚೇಳು ಬಿದ್ದಂತೆ ಬೆಚ್ಚಿಬೀಳುತ್ತಿದ್ದೆವು. ಹಾಗಿರುತ್ತಿತ್ತು ಅವನ ಸೀನು.

—ಕುಸುಮಾ ಎಚ್.ಕೆ., ಚಿಕ್ಕಬಳ್ಳಾಪುರ

## ಚಿಂತನೆಗೆ ಪ್ರೇರೇಪಿಸುವ ‘ಪ್ರವಾಸ’

‘ಹೆಗ್ಗುಂದ: ಶ್ರೀರಾಮನ ಅಶ್ವಮೇಧದ ಕುದುರೆ ಕಟ್ಟಿದ ಸ್ಥಳ’ (ಫೆ. 08, ಡಾ. ಕೀರ್ತಿ ಮಲ್ಹೋತ್ರ) ಪ್ರವಾಸ ಚಿಂತನ ಬರಹ, ಚಾರಣಿಗರಿಗೆ, ಇತಿಹಾಸಪ್ರಿಯರಿಗೆ ಉಪಯುಕ್ತವಾಗಿದೆ. ಚಿಂತನೆಗೆ ಹಚ್ಚುತ್ತದೆ. ಅವರು ಈ ಹಿಂದೆ ಬರೆದಿದ್ದ ‘ಸುರಗಿರಿ ದುರ್ಗ’ (ಸಿದ್ಧರ ಬೆಟ್ಟ) ಮತ್ತು ಹೆಗ್ಗುಂದದ ನಡುವೆ ರಾಮ ದೇವರ ಏಕಶಿಲಾ ಬೆಟ್ಟ ಇದ್ದು, ಇದು ಬೋರಲು ಹಾಕಿದ ಕೊಬ್ಬರಿ ಬಟ್ಟಲಿನಂತೆ ಕಾಣುತ್ತದೆ. ಈ ಬೆಟ್ಟಗಳು ಕ್ಲೋಸ್‌ಪೇಟೆ ರಾಕ್ಸ್‌ಗಳ ಸಾಲಿಗೆ ಸೇರುತ್ತವೆ.

ರಾಮದೇವರ ಬೆಟ್ಟದ ಬುಡದಲ್ಲಿ ಕಪ್ಪು ಶಿಲೆಯ ಉದ್ದನೆಯ ಪಟ್ಟೆಯಿದ್ದು ಅದನ್ನು ಬಾಕುವಿನ ಅರೆ ಎನ್ನುತ್ತಾರೆ.

ರಾಮನು ಈ ಬೆಟ್ಟದಿಂದ ಹೆಗ್ಗುಂದಕ್ಕೆ ಕುದುರೆ ಮೇಲೆ ಹಾರಿದಾಗ ಅವನ ಸೊಂಟದಿಂದ ಜಾರಿಬಿದ್ದ ಬಾಕು ಎಂದು ಜನ ನಂಬುತ್ತಾರೆ. ಭೂವಿಜ್ಞಾನದ ಪ್ರಕಾರ ಅದು ಲಾವಾರಸ ನುಗ್ಗಿ ಉಂಟಾದ ಡೈಕ್ ಇರಬಹುದು. ಬೆಟ್ಟದ ಮೇಲೆ ಒಂದು ದೇವಸ್ಥಾನವಿದ್ದು, ಸಾವಿರಾರು ಭಕ್ತರು ಇಲ್ಲಿಗೆ ಬರುತ್ತಾರೆ. ಈ ಕುರಿತು ಒಂದಿಷ್ಟು ಬೆಳಕು ಚೆಲ್ಲಿದರೆ ಉಪಯುಕ್ತ.

—ಎಲ್.ಎಸ್. ಶಾಮಸುಂದರ ಶರ್ಮ

## ಕುತೂಹಲಕಾರಿ ‘ಮೆಕ್ಯಾನಿಸಂ’

‘ಆಂಟಿಕಿತೆರಾ ಮೆಕ್ಯಾನಿಸಂ; ವಿಜ್ಞಾನದ ಮರೆತ ಕುರುಹು’ (ಫೆ. 08, ಡಾ. ಜೆ. ಬಾಲಕೃಷ್ಣ) ಬಹಳ ಕುತೂಹಲಕಾರಿ ಲೇಖನ. ಭೂಗರ್ಭದಲ್ಲಿ ಹುದುಗಿದ್ದ ಈ ಉಪಕರಣ ಈಜುಗಾರರಿಂದ ಹೊರಬಂದ ನಂತರ ಅದನ್ನು ಜತನದಿಂದ ಸಂಗ್ರಹಿಸಿದ ಗ್ರೀಸ್ ಸರ್ಕಾರದ ಕೆಲಸವೂ ಶ್ಲಾಘನಾರ್ಹ. ಈ ಮೆಕ್ಯಾನಿಸಂ ಕುರಿತು ಲೇಖಕರು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಸಮುದ್ರದಾಳದಲ್ಲಿ ಈ ತರಹದ ವಸ್ತುಗಳಲ್ಲಿ ಇನ್ನೂ ಏನೇನು ಅಡಗಿದೆಯೋ? ಒಟ್ಟಾರೆ ಒಂದು ಒಳ್ಳೆಯ ಬರಹ.

—ನೀಲಕಂಠಪ್ಪ ಚಿಕ್ಕಮುದ್ದೆ, ಬೀರೂರು

## ರೋಚಕ ವಿವರಣೆ

ಆಂಟಿಕಿತೆರಾ ಕುರಿತ ಇತಿಹಾಸವನ್ನು ಲೇಖಕರು ಬಹಳ ರೋಚಕವಾಗಿ ವಿವರಿಸಿದ್ದಾರೆ. ಸುಮಾರು 2000 ವರ್ಷಗಳ ಹಿಂದೆಯೇ ಇಂತಹ ತಾಂತ್ರಿಕಜ್ಞಾನ ಆಗಿನ ಜನರಿಗಿತ್ತು ಎಂಬುದು ತಿಳಿದು ಅಚ್ಚರಿಯಾಯಿತು.

—ಹೇಮಂತ್ ಪೈ, ಬೆಂಗಳೂರು

## ವಿಜ್ಞಾನಿಗಳಿಗೆ ಸವಾಲು

ಲೇಖನದಲ್ಲಿ ತಿಳಿಸಿದ ಈ ಪ್ರಾಚೀನ ಮೆಕ್ಯಾನಿಸಂ ಹಾಗೂ ಅದರ ವೈಖರಿ ಕುತೂಹಲಕರವಾಗಿದ್ದು, ಇಂದಿನ ವಿಜ್ಞಾನಿಗಳಿಗೆ ಒಂದು ಸವಾಲೇ ಸರಿ.

—ಲಕ್ಷ್ಮಣ್ ಜಿ., ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in